2
ಉದಯವಾಣಿ
ರಾಮನಗರ

ಆಯತಪ್ಪಿ ಬಿದ್ದು ತಾಯಿ, ಮಗಳು ಸಾವು

28ರಂದು ರಾಜ್ಯಮಟ್ಟದ ಕನ್ನಡ ಚರ್ಚಾ ಸ್ಪರ್ಧೆ

# ಸರ್ಕಾರಿ ಶಾಲೆಗಳ ಸಬಲೀಕರಣವೇ ನಮ್ಮ ಗುರಿ

## ಯುವ ಬೆಂಗಳೂರು ಟ್ರಸ್ಟ್ ಅಧ್ಯಕ್ಷ ಕಿರಣ್ ಅಭಿಮತ ■ ಶಾಲಾ ಮಕ್ಕಳಿಗೆ ಲೇಖನಿ ಸಾಮಗ್ರಿ ವಿತರಣೆ



ಪ್ರತಿಯೊಬ್ಬರಿಗೂ ಸಮಾನ ಶಿಕ್ಷಣ ಸಿಗಲಿ

ಉದಯವಾಣಿ Sun, 26 June 2022

# ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಯುವ ಬೆಂಗಳೂರು ಟ್ರಸ್ಟ್ ಸಹಕಾರ

ಪ್ರಜಾಯೋಗ

ಶಿರಾ: ಸರ್ಕಾರಿ ಶಾಲೆಗಳು ಉಳಿಯಬೇಕು, ಅಭಿವೃದ್ಧಿಯಾಗಬೇಕು. ಸರ್ಕಾರಿ ಶಾಲೆಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಿದರೆ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ದೊರಕುವುದರ ಜೊತೆಗೆ ದಾಖಲಾತಿಯೂ ಸಹ ಹೆಚ್ಚಾಗುತ್ತದೆ ಎಂಬ ಉದ್ದೇಶದಿಂದ ಯುವ ಬೆಂಗಳೂರು ಟ್ರಸ್ಟ್ ವತಿಯಿಂದ ಸರ್ಕಾರಿ ಶಾಲೆಗಳನ್ನು ದತ್ತು ಪಡೆದು ಅಭಿವೃದ್ಧಿಪಡಿಸಲಾಗುತ್ತದೆ ಎಂದು ಯುವ ಬೆಂಗಳೂರು ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷರಾದ ಜೆ.ಕಿರಣ್ ಸಾಗರ್ ಹೇಳಿದರು.

ಅವರು ತಾಲ್ಲೂಕಿನ ಕಳ್ಳಂಬೆಳ್ಳ ಗ್ರಾಮದಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯ ಎಲ್. ಕೆ.ಜಿ, ಯುಕೆಜಿ ನರ್ಸರಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತಹ ಸ್ಮಾರ್ಟ್ ಕ್ಲಾಸ್ ನಿರ್ಮಾಣ ಮಾಡಿ, ವಿದ್ಯಾರ್ಥಿಗಳಿಗೆ ಕಲಿಕಾ ಸಾಮಗ್ರಿಗಳನ್ನು, ನೋಟ್ ಪುಸ್ತಕ, ಪಠ್ಯಪುಸ್ತಕ, ಬ್ಯಾಗ್, ಸಮವಸ್ತ್ರ ವಿತರಿಸಿ ಮಾತನಾಡಿದರು. ರಾಷ್ಟ್ರೀಯ ಶಿಕ್ಷಣ ನೀತಿಯ ಅನುಸಾರ ಇನ್ನು ಮುಂದೆ ಸರಕಾರಿ ಶಾಲೆಗಳಲ್ಲಿ ನರ್ಸರಿ ತರಗತಿಯನ್ನು ಪ್ರಾರಂಭ ಮಾಡಲು ಸರಕಾರ ನಿರ್ಧರಿಸಿದೆ. ಈಗಾಗಲೇ ಹಲವು ಶಾಲೆಗಳಲ್ಲಿ ನರ್ಸರಿ ಶಾಲೆ ಪ್ರಾರಂಭವಾಗಿದೆ. ಅದರಲ್ಲಿ ಶಿರಾ ತಾಲ್ಲೂಕಿನ ಕಳ್ಳಂಬೆಳ್ಳ ಶಾಲೆಯೂ ಸಹ



ಶಿರಾ ತಾಲೂಕು ಕಳ್ಳಂಬೆಳ್ಳ ಗ್ರಾಮದಲ್ಲಿರುವ ಸರಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯ ಎಲ್.ಕೆ.ಜಿ, ಯುಕೆಜಿ ನರ್ಸರಿ ತರಗತಿಗಳ ಸ್ಮಾರ್ಟ್ ಕ್ಲಾಸ್‌ನ್ನು ಬಿಆರ್‌ಸಿ ಕುಮಾರ್ ಉದ್ಘಾಟಿಸಿದರು. ಯುವ ಬೆಂಗಳೂರು ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷರಾದ ಜೆ.ಕಿರಣ್ ಸಾಗರ್ ಸೇರಿದಂತೆ ಹಲವರು ಹಾಜರಿದ್ದರು.

ಒಂದು. ಸುಮಾರು ವರ್ಷಗಳಿಂದ ನರ್ಸರಿ ಶಾಲೆಗಳನ್ನು ನಡೆಸುತ್ತಿದ್ದರೂ ಮೂಲಭೂತ ಸೌಕರ್ಯಗಳಿರಲಿಲ್ಲ. ಇದನ್ನು ಮನಗಂಡ ಯುವ ಬೆಂಗಳೂರು ಟ್ರಸ್ಟ್ ಅಲ್ಲಿನ ಎಲ್‌ಕೆಜಿ, ಯುಕೆಜಿ ತರಗತಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ನಿರ್ಧರಿಸಿ ಮೊದಲು ಮಕ್ಕಳ ಕಲಿಗೆ ಅನುಕೂಲವಾಗುವಂತಹ ಬಣ್ಣಬಣ್ಣದ ಚಿತ್ರಗಳನ್ನು ಗೋಡೆಗಳಿಗೆ ಬಿಡಿಸಲಾಯಿತು. ನಂತರ ವಿವಿಧ ಬಣ್ಣದ ದೀಪಗಳನ್ನು ಹಾಕಿ, ಡೆಸ್ಕ್ ನೀಡಲಾಯಿತು. ಇದರೊಂದಿಗೆ ಮಕ್ಕಳು ಆಟವಾಡಲು ದೊಡ್ಡದೊಡ್ಡ ಆಟಿಕೆಗಳನ್ನು ನೀಡಲಾಗಿದೆ. ಒಟ್ಟಾರೆ ಶಾಲೆಗೆ ಸ್ಮಾರ್ಟ್ ಕ್ಲಾಸ್ ನಡೆಸಲು ಪ್ರೊಜೆಕ್ಟರ್ ನೀಡಲಾಗಿದೆ. ಸಂಪೂರ್ಣ ಸ್ಮಾರ್ಟ್ ರೀತಿಯಲ್ಲಿ ಮಾಡಲು ವ್ಯವಸ್ಥೆ ಮಾಡಲಾಗಿದೆ. ಯುವ ಬೆಂಗಳೂರು ಟ್ರಸ್ಟ್‌ನಿಂದ ಇದು ನಿರಂತರವಾಗಿರುತ್ತದೆ. ಪ್ರತಿ ವರ್ಷವೂ ಅಗತ್ಯವಿರುವ ಮಕ್ಕಳಿಗೆ ನೀಡಲಾಗುತ್ತದೆ ಎಂದರು.

ಯುವ ಬೆಂಗಳೂರು ಟ್ರಸ್ಟ್ ಕಾರ್ಯದರ್ಶಿ ಶ್ವೇತ ಅವರು ಮಾತನಾಡಿ ಯುವ ಬೆಂಗಳೂರು ಟ್ರಸ್ಟ್ ಕಳೆದ 14 ವರ್ಷಗಳಿಂದ ಸರ್ಕಾರಿ ಶಾಲೆಗಳ ಅಭಿವೃದ್ಧಿಗಾಗಿ ಕೆಲಸ ಮಾಡುತ್ತಿದೆ. ಮಾಗಡಿ, ರಾಮನಗರ, ಮಂಡ್ಯ, ತುಮಕೂರು ಸೇರಿದಂತೆ 250ಕ್ಕೂ ಹೆಚ್ಚು ಗ್ರಾಮೀಣ ಸರಕಾರಿ ಶಾಲೆಗಳನ್ನು ದತ್ತು ತೆಗೆದುಕೊಂಡಿದೆ. ಸರಕಾರಿ ಶಾಲೆಗಳನ್ನು ಒಂದು ಮಾದರಿ ಶಾಲೆಗಳನ್ನಾಗಿ ಮಾಡುವ ಉದ್ದೇಶ ಹೊಂದಿದೆ. ಆ ನಿಟ್ಟಿನಲ್ಲಿ ಮಕ್ಕಳಿಗೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಒದಗಿಸುತ್ತಿದೆ. ಪ್ರತಿ ವರ್ಷ ಸರಕಾರಿ ಶಾಲಾ ಮಕ್ಕಳಿಗೆ ಸ್ಕೂಲ್ ಬ್ಯಾಗ್, ನೋಟ್ ಪುಸ್ತಕ, ಪಠ್ಯ ಪುಸ್ತಕ, ಸಮವಸ್ತ್ರ, ಡೆಸ್ಕ್, ಚಳಿಗಾಲದಲ್ಲಿ ಸ್ವೆಟರ್, ಆಟೋಪಕರಣ, ಪಿಠೋಪಕರಣ, ವಾಟರ್ ಫಿಲ್ಟರ್ ಹಾಗೂ ಶಾಲೆಗೆ ಬೇಕಾದಂತಹ ಮೂಲಭೂತ ಸೌಕರ್ಯಗಳನ್ನು ಒದಗಿಸುತ್ತಾ ಬಂದಿದೆ. ಹಾಗೂ ಹಲವಾರು ಅಂಗನವಾಡಿಗಳ ಅಭಿವೃದ್ಧಿಗೂ ಕೈಜೋಡಿಸುತ್ತಾ ಬಂದಿದೆ ಎಂದರು.

ಕಾರ್ಯಕ್ರಮದಲ್ಲಿ ಬಿಆರ್‌ಸಿ ಕುಮಾರ್, ನರೇಂದ್ರಕುಮಾರ್, ಕಳ್ಳಂಬೆಳ್ಳ ಶಾಲೆಯ ಮುಖ್ಯ ಶಿಕ್ಷಕ ಅನಿಲ್, ಯುವ ಬೆಂಗಳೂರು ಟ್ರಸ್ಟಿಗಳಾದ ಸುನಿಲ್, ಪ್ರವೀಣ್, ನಂದೀಶ್, ಎಸ್.ಡಿ.ಎಂ.ಸಿ. ಅಧ್ಯಕ್ಷ ಚಂದ್ರಶೇಖರ್, ರಾಜಣ್ಣ ಸೇ-ರಿದಂತೆ ಹಲವರು ಹಾಜರಿದ್ದರು.

# ಸರ್ಕಾರಿ ಶಾಲೆ, ವಿದ್ಯಾರ್ಥಿಗಳ ಅಭಿವೃದ್ಧಿಪಡಿಸುವುದೇ ಯುವ ಬೆಂಗಳೂರು ಟ್ರಸ್ಟ್ ಉದ್ದೇಶ: ಜಿ.ಕಿರಣ್ ಸಾಗರ್




ಶಿರಾ: ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಹಾಗೂ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಯುವ ಬೆಂಗಳೂರು ಟ್ರಸ್ಟ್ 2008ರಲ್ಲಿ ಸ್ಥಾಪನೆಯಾಗಿ ಸರ್ಕಾರಿ ಶಾಲೆಗಳನ್ನು ಪರಿವರ್ತಿಸುವ ಮತ್ತು ಮಕ್ಕಳು ಮತ್ತು ಯುವಕರನ್ನು ಸಬಲೀಕರಣಗೊಳಿಸುವ ಉದ್ದೇಶದಿಂದ ಸ್ಥಾಪಿಸಿದ ಸಂಸ್ಥೆಯಾಗಿದೆ ಎಂದು ಯುವ ಬೆಂಗಳೂರು ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷರಾದ ಜಿ.ಕಿರಣ್ ಸಾಗರ್ ಹೇಳಿದರು.

ಅವರು ನಗರದ ಸರ್ಕಾರಿ ಬಾಲಕಿಯರ ಪ.ಪೂ. ಕಾಲೇಜಿನ ಪ್ರೌಢಶಾಲಾ ವಿಭಾಗಕ್ಕೆ ಯುವ ಬೆಂಗಳೂರು ಟ್ರಸ್ಟ್ ವತಿಯಿಂದ ಸುಮಾರು 2.80 ಲಕ್ಷ ವೆಚ್ಚದ ಸ್ಮಾರ್ಟ್ ಬೋರ್ಡ್ ವಿತರಣೆ ಮಾಡಿ ಮಾತನಾಡಿದರು. ಯುವ ಬೆಂಗಳೂರು ಟ್ರಸ್ಟ್‌ನಿಂದ 2023 ರ ಮಾರ್ಚ್‌ನಲ್ಲಿ ತುಮಕೂರು, ಮಧುಗಿರಿ, ಕೋಲಾರ ಮತ್ತು ರಾಮನಗರ ಜಿಲ್ಲೆಗಳಲ್ಲಿ 10 ಸ್ಮಾರ್ಟ್ ಕ್ಲಾಸ್‌ಗಳನ್ನು ಸ್ಥಾಪಿಸಿ ಸ್ಮಾರ್ಟ್ ಬೋರ್ಡ್‌ಗಳನ್ನು ವಿತರಿಸಲಾಗಿದೆ. ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸದ ಅವಧಿಯಲ್ಲಿ ಮನಸ್ಸಿಟ್ಟು ಓದಿದರೆ ಯಶಸ್ಸು ಗಳಿಸಬಹುದು, ವಿದ್ಯಾರ್ಥಿಗಳು ಕಷ್ಟಕ್ಕೆ ಹೆದರಬಾರದು ಅವುಗಳನ್ನು ಎದುರಿಸಿ ಮುನ್ನಡೆಯಬೇಕು. ಸರ್ಕಾರಿ ಶಾಲೆಗಳಲ್ಲಿ ಉತ್ತಮ ಶಿಕ್ಷಣ ಸಿಗುತ್ತದೆ. ಸರ್ಕಾರಿ ಶಾಲೆಗಳಲ್ಲಿ ಸಿಗುವಷ್ಟು ಉತ್ತಮ ವಿದ್ಯಾಭ್ಯಾಸ ಬೇರೆಲ್ಲೂ ಸಿಗುವುದಿಲ್ಲ. ಈ ದೇಶದಲ್ಲಿ ಉನ್ನತ ವಿದ್ಯಾಭ್ಯಾಸ ಮಾಡಿ ಉನ್ನತ ಹುದ್ದೆ ಪಡೆದವರೆಲ್ಲರೂ ಸರ್ಕಾರಿ ಶಾಲೆಯಲ್ಲಿಯೇ ಓದಿದವರು. ಸರ್ಕಾರಿ ಶಾಲೆಯಲ್ಲಿ ಓದುತ್ತಿರುವುದಕ್ಕೆ ಹೆಮ್ಮೆ ಪಡಬೇಕು ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಕೃಷ್ಣಪ್ಪ ಅವರು ಮಾತನಾಡಿ ಸರ್ಕಾರಿ ಶಾಲೆಗಳಲ್ಲಿ ಉತ್ತಮ ಶಿಕ್ಷಣ ದೊರಕುತ್ತಿದೆ. ಈ ನಿಟ್ಟಿನಲ್ಲಿ ಶಿರಾ ತಾಲ್ಲೂಕಿಗೆ ಅಕ್ಕಪಕ್ಕದ ತಾಲ್ಲೂಕಿನಿಂದಲೂ ಹೆಚ್ಚು ವಿದ್ಯಾರ್ಥಿಗಳು ವಿದ್ಯಾಭ್ಯಾಸಕ್ಕೆ ಬರುತ್ತಾರೆ. ಮುಂದಿನ ದಿನಗಳಲ್ಲಿ ಶಿರಾ ತಾಲ್ಲೂಕನ್ನು ಶಿಕ್ಷಣ ಕಾಶಿ ಮಾಡಬೇಕೆಂಬುದು ನಮ್ಮೆಲ್ಲೆ ಆಶಯವಾಗಿದೆ. ಆದ್ದರಿಂದ ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸಲು ಸಂಘ ಸಂಸ್ಥೆಗಳ ಸಹಕಾರ ಅಗತ್ಯವಾಗಿದೆ. ಅಂತಹ ಕೆಲಸವನ್ನು ಯುವ ಬೆಂಗಳೂರು ಟ್ರಸ್ಟ್ ವತಿಯಿಂದ ಮಾಡುತ್ತಿರುವುದು ಶ್ಲಾಘನೀಯ, ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕ, ಬ್ಯಾಗ್, ಸ್ಮಾರ್ಟ್ ಬೋರ್ಡ್ ಸೇರಿದಂತೆ ವಿವಿಧ ರೀತಿಯಲ್ಲಿ ಅನುಕೂಲ ಮಾಡುತ್ತಿರುವ ಟ್ರಸ್ಟ್ ಕಾರ್ಯ ಮೆಚ್ಚುವಂತಹದ್ದು ಎಂದರು.

ಕಾರ್ಯಕ್ರಮದಲ್ಲಿ ಸರ್ಕಾರಿ ಬಾಲಕಿಯರ ಪ.ಪೂ. ಕಾಲೇಜಿನ ಪ್ರಾಂಶುಪಾಲ ಚಂದ್ರಯ್ಯ, ಉಪ ಪ್ರಾಂಶುಪಾಲ ಅಣ್ಣೇಶ್, ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿ ಸಿದ್ದೇಶ್ವರ್, ಯುವ ಬೆಂಗಳೂರು ಟ್ರಸ್‌ನ ಕಾರ್ಯದರ್ಶಿ ಶ್ವೇತಾ ಎಸ್ ರಾವ್, ಟ್ರಸ್ಟಿಗಳಾದ ಸುನಿಲ್.ಬಿ.ವಿ, ಅಶೋಕ್, ಪ್ರವೀಣ್, ಶಿಕ್ಷರಾದ ಶಿವರಾಮ್, ಮಂಜಪ್ಪ.ಪಿ, ಬಸವರಾಜು, ಗೋವಿಂದಪ್ಪ, ಸವಿತ.ಡಿ, ರತ್ನಮ್ಮ, ಜಯಕುಂದ್ರಾಳ್, ನೀಲಮ್ಮ, ಉಷಾ, ರಾಜಣ್ಣ, ಹೇಮಲತಾ, ಧನಲಕ್ಷ್ಮಿ, ಪಾರ್ವತಮ್ಮ, ಸುಜಾತ, ಸುಮಿತ್ರ ಸೇರಿದಂತೆ ಹಲವರು ಹಾಜರಿದ್ದರು.










# ಯುವ ಬೆಂಗಳೂರು ಸಂಸ್ಥೆ ಪದಾಧಿಕಾರಿಗಳ ಪದಗ್ರಹಣ

**ಬೆಂಗಳೂರು:** ಯುವ ಬೆಂಗಳೂರು ಸಂಸ್ಥೆ 7/1/2024 ಭಾನುವಾರ ತನ್ನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮವನ್ನು ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರಿನಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮಕ್ಕೆ ಕುವೆಂಪು ಸಿರಿಗನ್ನಡ ವೇದಿಕೆಯ ಸಂಸ್ಥಾಪಕ ಅಧ್ಯಕ್ಷರಾದ ವಿ.ಟಿ.ರಾಮಕೃಷ್ಣಯ್ಯ, ಇಂಡಸ್ಟ್ರಿಯಲ್ ಟೂಲ್ಸ್ ಸೇಲ್ಸ್ ಮತ್ತು ಮಾರ್ಕೆಟಿಂಗ್ ಸ್ಪೆಷಲಿಸ್ಟ್ ಶ್ರೀ ಕಿರಣ್ ಕುಮಾರ್ ವಿ. ಹಾಗೂ ನಿವೃತ್ತ ಶಾಲಾ ಶಿಕ್ಷಕರು, ಸರ್ಕಾರಿ ಅನುದಾನಿತ ಶಾಲೆ ಬಿ.ನಾಗರತ್ನಮ್ಮ ಅವರು ಮುಖ್ಯ ಅತಿಥಿಗಳಾಗಿ ಸಮಾರಂಭವನ್ನು ಅಲಂಕರಿಸಿದರು.

ಸಂಸ್ಥೆಯಲ್ಲಿ ಸ್ವಯಂಸೇವಕರಾಗಿ ಕಾರ್ಯನಿರ್ವಹಿಸಿದ ಶ್ರೀ ಸುನಿಲ್ ಬಿ.ವಿ. ಅಧ್ಯಕ್ಷರಾಗಿ, ಸ್ನೇಹ ಸಿಂಧಿಯ ಕಾರ್ಯದಕ್ಷರಾಗಿ, ಸ್ನೇಹ ಗೋಪಾಲ್ ಕಾರ್ಯದರ್ಶಿಯಾಗಿ, ಪ್ರವೀಣ್ ಎಸ್ ಬಿ ಖಜಾಂಚಿಯಾಗಿ, ರಾಹುಲ್ ಆರ್ ಶಿಕ್ಷಣ ನಿರ್ದೇಶಕರಾಗಿ, ನವೀನ್ ಎಂ ಡಿ ಪರಿಸರ ನಿರ್ದೇಶಕರಾಗಿ, ತೇಜಸ್ ಜಿ ಆರ್ ಆರೋಗ್ಯ ನಿರ್ದೇಶಕರಾಗಿ, ಸುಹಾಸ್ ಜಿ ಎಸ್ ಸಮುದಾಯ ಸೇವೆ ನಿರ್ದೇಶಕರಾಗಿ ಪದಗ್ರಹಣ ಹೊಂದಿದರು. ಇದರ ಜೊತೆಗೆ ಶ್ರೇಯಸ್ ಜಿ, ರೋಹಿತ್ ಎಂ.ಆರ್, ನಂದೀಶ್ ಎಸ್, ರಾಘವೇಂದ್ರ ಂ, ಸಂಗೀತ ಪ್ರಭು, ನವನೀತ ಆರ್, ಭವ್ಯ ಆರ್ ಮತ್ತು ಶಿವರಾಜ್ ವಿವಿಧ ವಿಭಾಗಗಳಲ್ಲಿ ಜಂಟಿ ನಿರ್ದೇಶಕರಾಗಿ ಪದಗ್ರಹಣ ಹೊಂದಿದರು.




ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಕಿರಣ್ ಜಿ ಸಾಗರ್ ರವರು ಮಾತನಾಡುತ್ತ ಅಡಿ APJ ಅಬ್ದುಲ್ ಕಲಾಂ ರವರ ಆಣತಿ, ಆಶಯದಂತೆ ಯುವ ಬೆಂಗಳೂರು ಸಂಸ್ಥೆ ಸ್ಥಾಪಿಸಲಾಯಿತು. ಸದೃಢ ಭಾರತಕ್ಕೆ ಯುವಕರ ಕೊಡುಗೆ ಮಹತ್ವವಾದುದು. ಈ ಯುವ ಶಕ್ತಿಯ ಮೂಲಕ ಸಮಾಜವನ್ನು ಸೇವೆಯ ಮೂಲಕ ಕಟ್ಟಬೇಕೆಂದು ಕಟ್ಟಿದ ಸಂಸ್ಥೆ ಇಂದು 15000 ಕ್ಕೂ ಹೆಚ್ಚು ಸ್ವಯಂ ಸೇವಕರನ್ನು ಹೊಂದಿ, ಸಂಸ್ಥೆಯ ಹಲವು ಯೋಜನೆಗಳ ಮೂಲಕ ತಮ್ಮ ಸೇವೆ ಸಲ್ಲಿಸುತ್ತಿದ್ದಾರೆ. ತಮ್ಮ ಸಂಸ್ಥೆಯು ಇಂದಿಗೂ ಪಾರದರ್ಶಕವಾಗಿ, ಜವಾಬ್ದಾರಿಯುತವಾಗಿ ಹಾಗೂ ಹೊಣೆಗಾರಿಕೆಯಿಂದ ಪ್ರತಿ ಹೆಜ್ಜೆಯಲ್ಲೂ ಕೆಲಸ ಮಾಡುತ್ತ ಬಂದಿದೆ. ಇದು ಈ ಸಂಸ್ಥೆಯ ಬದ್ಧತೆಗೆ ಹಿಡಿದ ಕನ್ನಡಿಯೆಂದು ಹೇಳಿದರು.

ಸಂಸ್ಥೆಯ ಅಧ್ಯಕ್ಷರಾದ ಶ್ರೀ ಸುನಿಲ್ ಬಿ ವಿ ರವರು ಮಾತನಾಡುತ್ತಾ 15 ವರ್ಷದಲ್ಲಿ ಯುವ ಸಂಸ್ಥೆಯು ಸಮಾಜದಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದ ಕ್ಷೇತ್ರಗಳಲ್ಲಿ ಶಕ್ತಿ ತುಂಬುವ ಕೆಲಸ ಮಾಡುತ್ತ ಬಂದಿದೆ. ಇದರಲ್ಲಿ ಸ್ವಯಂಸೇವಕರ ಪಾತ್ರ ಬಹು ದೊಡ್ಡದೆಂದು ಹೇಳಿದರು.

ಕಾರ್ಯಕ್ರಮದ ಉಸ್ತುವಾರಿ ವಹಿಸಿದ ಪ್ರಧಾನ ಕಾರ್ಯದರ್ಶಿಯಾದ ಶ್ವೇತ ಎಸ್ ರಾವ್ ಮಾತನಾಡಿ ಹೆಣ್ಣು ಮಕ್ಕಳ ಶಿಕ್ಷಣದಲ್ಲಿ ಇರುವ ಸವಾಲುಗಳು ಹಾಗೂ ಪದಗ್ರಹಣ ಹೊಂದಿದ ಪದಾಧಿಕಾರಿಗಳ ಜವಾಬ್ದಾರಿಯನ್ನು ತಿಳಿಸಿಕೊಟ್ಟರು.




ಶಿಕ್ಷಣ ನಿರ್ದೇಶಕರಾದ ರಾಹುಲ್ ಮಾತನಾಡಿ ಯುವ ಬೆಂಗಳೂರು ಶಿಕ್ಷಣ ಕ್ಷೇತ್ರದಲ್ಲಿ ಸಂಸ್ಥೆ ಮಾಡಿರುವ ಕೆಲಸವನ್ನು ಸ್ಮರಿಸುತ್ತ ಹಾಗೂ ಇಲ್ಲಿನ ಹಲವು ಯೋಜನೆಗಳು ಇಂದು ಸರ್ಕಾರದ ಮಹತ್ವದ ಯೋಜನೆಗಳಾಗಿರೋ ಬಗ್ಗೆ ತಿಳಿಸಿಕೊಟ್ಟರು. ಪ್ರತಿಯೊಬ್ಬರ ಪದಗ್ರಹಣದ ಸಮಯದಲ್ಲಿ ತಮ್ಮ ಕುಟುಂಬದವರನ್ನು ವೇದಿಕೆಗೆ ಕರೆಸಿ ಗೌರವ ಸಲ್ಲಿಸಿರುವುದು ಮೌಲ್ಯಧಾರಿತ ಶಿಕ್ಷಣದ ಪ್ರತಿಬಿಂಬವೆಂದು ವ್ಯಕ್ತಪಡಿಸಿದರು.

ಪರಿಸರ ನಿರ್ದೇಶಕರಾದ ನವೀನ್ ಎಂ ಡಿ ಮಾತನಾಡುತ್ತಾ ನಾವು ನಮ್ಮ ದೈನಂದಿಕ ಬದುಕಿನಲ್ಲಿ ಮಾಡಿಕೊಳ್ಳುವ ಸಣ್ಣ ಸಣ್ಣ ಬದಲಾವಣೆಗಳಿಂದ ಹೇಗೆ ಅದು ನಮಗೆ ಧನಾತ್ಮಕ ಪರಿಣಾಮಗಳನ್ನು ಉಂಟುಮಾಡುತ್ತದೆ ಎಂದು ತಿಳಿಸಿಕೊಟ್ಟರು.

ಆರೋಗ್ಯ ನಿರ್ದೇಶಕರಾದ ತೇಜಸ್ ಜಿ ಆರ್ ರವರು ಮಾತನಾಡುತ್ತಾ ಆರೋಗ್ಯ ಮತ್ತು ನೈರ್ಮಲ್ಯದ ಬಗ್ಗೆ ತಿಳಿಸುತ್ತ, ಸರ್ಕಾರದ ಯೋಜನೆಗಳಲ್ಲಿ ಸ್ವಯಂಸೇವಕ ಸಂಸ್ಥೆಗಳು ಕೈಜೋಡಿಸಬೇಕೆಂದು ಹೇಳಿದರು.

ಮತ್ತೊಬ್ಬ ಮುಖ್ಯ ಅತಿಥಿ ಗಳಾದ ಶ್ರೀಕಿರಣ್ ಕುಮಾರ್ ವಿ ರವರು ಮಾತನಾಡುತ್ತ ಆಧುನಿಕತೆಯ ಬರದಲ್ಲಿ ನಾವು ಪರಿಸರದ ಕಾಳಜಿಯನ್ನು ಮರೆಯಬಾರದು. ನಮ್ಮ ಜವಾಬ್ದಾರಿಯುತ ಬದುಕಿನಲ್ಲಿ ಇರುವ ಸೂಕ್ಷ್ಮತೆಗಳನ್ನು ನಿರ್ವಹಿಸುವ ಕುರಿತು ಯುವಕರಿಗೆ ತಿಳಿಸಿದರು.

ಮುಖ್ಯ ಅತಿಥಿಗಳಾದ ನಾಗರತ್ನಮ್ಮ ರವರು ಮಾತನಾಡುತಾ ತಮ್ಮ ಸುದೀರ್ಘಾವಧಿಯ ಸೇವೆಯಲ್ಲಿ ಕನ್ನಡ ಶಾಲೆಯ ಪ್ರಾಮುಖ್ಯತೆ ಹಾಗೂ ಅದರ ಬೆಳವಣಿಗೆಯ ಚಿತ್ರಣವನ್ನು ತಿಳಿಸಿದರು. ಕನ್ನಡ ಶಾಲೆಯಲ್ಲಿ ಶಿಕ್ಷಕರ ಪಾತ್ರವನ್ನು ಅದ್ಭುತವಾಗಿ ತಿಳಿಸಿಕೊಟ್ಟರು.

### ಸಂಸ್ಥೆಯ trusteeಯಾದ ಅಶೋಕ್ ರವರು ಕಳೆದ ವರ್ಷ 2023ರಲ್ಲಿ ಯುವ ಬೆಂಗಳೂರು ಸಂಸ್ಥೆಯ ಸಾಧನೆ ಪಟ್ಟಿ ವಿವರ

- 20000 ಕ್ಕೂ ಹೆಚ್ಚು ಸಸಿ ಹಾಗೂ seed ಬಾಲ್ಸ್ ವಿತರಣೆ ಮಾಡಲಾಗಿದೆ
- 2800ಕ್ಕೂ ಹೆಚ್ಚು ಸ್ವೆಟರುಗಳನ್ನು ವಿತರಿಸಲಾಗಿದೆ
- 6000ಕ್ಕೂ ಹೆಚ್ಚು ಶಾಲಾ ಕಿಟ್‌ಗಳನ್ನು ವಿತರಿಸಲಾಗಿದೆ
- 5600 ವಿದ್ಯಾರ್ಥಿಗಳು ಸ್ಮಾರ್ಟ್ ಕ್ಲಾಸ್ ಪ್ರೊಜೆಕ್ಟರ್ ಫಲಾನುಭವಿಗಳಾಗಿದ್ದಾರೆ
- 35ಕ್ಕೂ ಹೆಚ್ಚು ವಿದ್ಯಾರ್ಥಿವೇತನವನ್ನು ವಿದ್ಯಾರ್ಥಿಗಳಿಗೆ ವಿತರಿಸಲಾಗಿದೆ.
- 900ಕ್ಕೂ ಹೆಚ್ಚು ಸ್ವಯಂಸೇವಕರು ನೋಂದಣಿಯಾಗಿದಾರೆ
- 1500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಕೌಶಲ್ಯ ಅಭಿವೃದ್ಧಿ ತರಬೇತಿಗಳನ್ನು ಪಡೆದುಕೊಂಡಿದಾರೆ
- 257 ಕ್ಕೂ ಹೆಚ್ಚು ಶಾಲೆಗಳು ನೇರ ಫಲಾನುಭವಿಗಳು ಆಗಿವೆ
- 300ಕ್ಕೂ ಹೆಚ್ಚು ಯೂನಿಟ್ ರಕ್ತ ಸಂಗ್ರಹಣೆಯನ್ನು ಮಾಡಲಾಗಿದೆ.